**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.**

**ಸಿ.ಸಿ. ನಂ.639/2025.**

ಪಿರ್ಯಾದುದಾರರುಃ- ಮಂಕಿ ಪೊಲೀಸ್ ಠಾಣೆ ,
ಮಂಕಿ,
ತಾಲೂಕುಃ- ಹೊನ್ನಾವರ (ಉ.ಕ.).

**- ವಿರುದ್ಧ -**

ಆರೋಪಿತರುಃ-

1. ಶಿವರಾಮ ಹನುಮಂತ ನಾಯ್ಕ,
ಪ್ರಾಯ ಸುಮಾರುಃ- 21 ವರ್ಷ,
ಉದ್ಯೋಗಃ ವಿದ್ಯಾರ್ಥಿ,
ಸಾಕೀನಃ- ಮಂಕಿ, ಖಾಜಿ ಮನೆ,
ತಾಲೂಕುಃ- ಹೊನ್ನಾವರ.

2. ಮನ್ನಿ @ ಮನೋಜ ಲಕ್ಷ್ಮಣ ನಾಯ್ಕ,
ಪ್ರಾಯ ಸುಮಾರುಃ- 22 ವರ್ಷ,
ವೃತ್ತಿಃ- ವಿದ್ಯಾರ್ಥಿ,
ಸಾಕೀನಃ- ಮಂಕಿ, ಖಾಜಿಮನೆ, ಹಾಲಿಃ ಬಾಲಯ್ಯನವಾಡಿ,
ತಾಲೂಕುಃ-ಹೊನ್ನಾವರ.

3. ಸುಚಿತ್ರಾ ಹನುಮಂತ ನಾಯ್ಕ,
ಪ್ರಾಯ ಸುಮಾರುಃ- 18 ವರ್ಷ 3 ತಿಂಗಳು,
ಉದ್ಯೋಗಃ ವಿದ್ಯಾರ್ಥಿ,
ಸಾಕೀನಃ- ಮಂಕಿ, ಖಾಜಿ ಮನೆ,
ತಾಲೂಕುಃ- ಹೊನ್ನಾವರ.

4. ಹನುಮಂತ ಶಿವರಾಮ ನಾಯ್ಕ,
ಪ್ರಾಯ ಸುಮಾರುಃ- 47 ವರ್ಷ,

ಉದ್ಯೋಗಃ ರೈತ,
ಸಾಕೀನಃ- ಮಂಕಿ, ಖಾಜಿ ಮನೆ,
ತಾಲೂಕುಃ- ಹೊನ್ನಾವರ.

5. ಅಣ್ಣಯ್ಯ ಗಣಪತಿ ನಾಯ್ಕ,
ಪ್ರಾಯ ಸುಮಾರುಃ- 78 ವರ್ಷ,
ಉದ್ಯೋಗಃ ಕೂಲಿ ಕೆಲಸ,
ಸಾಕೀನಃ- ಮಂಕಿ, ಬಾಲಯ್ಯನವಾಡಿ,
ತಾಲೂಕುಃ- ಹೊನ್ನಾವರ.

6. ವಿಷ್ಣು ಶಿವರಾಮ ನಾಯ್ಕ,
ಪ್ರಾಯ ಸುಮಾರುಃ- 51 ವರ್ಷ,
ಉದ್ಯೋಗಃ ಕೂಲಿ ಕೆಲಸ,
ಸಾಕೀನಃ- ಮಂಕಿ, ಖಾಜಿ ಮನೆ,
ತಾಲೂಕುಃ- ಹೊನ್ನಾವರ.

7. ನೇತ್ರಾವತಿ ಕೋಂ ಲಕ್ಷ್ಮಣ ನಾಯ್ಕ,
ಪ್ರಾಯ ಸುಮಾರುಃ- 41 ವರ್ಷ,
ಉದ್ಯೋಗಃ ಮನೆ ಕೆಲಸ,
ಸಾಕೀನಃ- ಮಂಕಿ, ಬಾಲಯ್ಯನವಾಡಿ,
ತಾಲೂಕುಃ- ಹೊನ್ನಾವರ.

8. ನೀಲಾ ಕೋಂ ಹನುಮಂತ ನಾಯ್ಕ,
ಪ್ರಾಯ ಸುಮಾರುಃ- 42 ವರ್ಷ,
ಉದ್ಯೋಗಃ ಮನೆ ಕೆಲಸ,
ಸಾಕೀನಃ- ಮಂಕಿ, ಖಾಜಿ ಮನೆ,
ತಾಲೂಕುಃ- ಹೊನ್ನಾವರ.

9. ಸರಸ್ವತಿ ಕೋಂ ವಿಷ್ಣು ನಾಯ್ಕ,
ಪ್ರಾಯ ಸುಮಾರುಃ- 45 ವರ್ಷ,

ಉದ್ಯೋಗಃ ಮನೆ ಕೆಲಸ,
ಸಾಕೀನಃ- ಮಂಕಿ, ಖಾಜಿ ಮನೆ,
ತಾಲೂಕುಃ- ಹೊನ್ನಾವರ.

*****

## ದೋಷಾರೋಪಣೆ

ಶ್ರೀ ಅನಿಲ್ ಜೋನ್ ಸಿಕ್ವೇರಾ., ಬಿ.ಬಿ.ಎ.,ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸುತ್ತಿದ್ದೇನೆ.

ಮಂಕಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಮಂಕಿ ಖಾಜಿಮನೆಯಲ್ಲಿ ದಿನಾಂಕ 07/12/2024 ರಂದು ಬೆಳಿಗ್ಗೆ 07.00 ಗಂಟೆ ಸುಮಾರಿಗೆ ಪಿರ್ಯಾದಿಯವರ ವಾಸದ ಮನೆಯ ಮುಂದೆ ಹಾದು ಹೋಗಿರುವ ಮಣ್ಣಿನ ರಸ್ತೆಯ ಜಾಗದಲ್ಲಿ ತಮಗೆ ತಿರುಗಾಡಲು ಅಂತಾ ಪಿರ್ಯಾದಿ ಹಾಗೂ ಚಾಸಾ-8 ರವರು ಕೂಡಿಕೊಂಡು ದಾರಿ ಮಾಡಲು ಹೋದಾಗ ಆರೋಪಿತರಾದ ನೀವೆಲ್ಲರೂ ಅಪರಾದ ಮಾಡುವ ಏಕೋದ್ದೇಶದಿಂದ, ಅವರಿಗೆ ಈ ಜಾಗ ನಮ್ಮದು, ನಿಮ್ಮದೇನು ಅಧಿಕಾರ ಇರುವುದಿಲ್ಲ ಅಂತಾ ಹೇಳಿ ಕೆಟ್ಟದಾಗಿ ಬೈದು, ಬೇಲಿಗುಟ್ಟವನ್ನು ಕಿತ್ತು ಬಿಸಾಡಿ ಇಬ್ಬರನ್ನು ದೂಡಿ ಹಾಕಿದ್ದು, ಅದರ ಮೂಲಕ ಪಿರ್ಯಾದಿಯವರಿಗೆ ಅವಮಾನ ಮಾಡಿ ಆ ಮೂಲಕ ಪಿರ್ಯಾದಿಗೆ ಉದ್ರೇಕವನ್ನುಂಟು ಮಾಡಿ, ಸಾರ್ವಜನಿಕ ಶಾಂತಿ ಭಂಗವನ್ನು ಉಂಟು ಮಾಡುವ ಉದ್ದೇಶದಿಂದ ಅವರಿಗೆ ಅವಮಾನ ಮಾಡಿರುತ್ತೀರಿ, ಈ ಮೂಲಕ ಆರೋಪಿತರಾದ ನೀವೆಲ್ಲರೂ **ಭಾರತೀಯ ನ್ಯಾಯ ಸಂಹಿತೆ ಕಲಂ. 352 ಸಹಿತ 190** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಎರಡನೇಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಆರೋಪಿತರಾದ ನೀವೆಲ್ಲರೂ ಅಪರಾಧ ಮಾಡುವ ಏಕೋದ್ದೇಶದಿಂದ, 1 ಮತ್ತು 3 ನೇ ಆರೋಪಿತರಾದ ನೀವು ಪಿರ್ಯಾದಿಯವರಿಗೆ ಮಾನಭಂಗ ಮಾಡುವ ಉದ್ದೇಶದಿಂದ ಆಕೆಯ ಎದೆಯ ಮೇಲೆ ಕೈ ಹಾಕಿ ಬ್ಲೌಸ್ ನ್ನು ಹರಿದು ದೂಡಿ ಹಾಕಿದ್ದು, ಈ ಮೂಲಕ ಆರೋಪಿತರಾದ ನೀವೆಲ್ಲರೂ **ಭಾರತೀಯ ನ್ಯಾಯ ಸಂಹಿತೆ ಕಲಂ. 74 ಸಹಿತ** 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಮೂರನೇಯದಾಗಿ, ಈ ಮೇಲೆ ಹೇಳಿದ ಸ್ಥಳದಲ್ಲಿ, ದಿನಾಂಕಃ 08-12-2024 ರಂದು ಬೆಳಿಗ್ಗೆ 10-30ರ ಗಂಟೆ ಸುಮಾರಿಗೆ ಆರೋಪಿತರಾದ ನೀವೆಲ್ಲರೂ ಅಪರಾಧ ಮಾಡುವ ಏಕೋದ್ದೇಶದಿಂದ, ಫಾರೆಸ್ಟ ಸರ್ವೆ ಸಂಖ್ಯೆ: 238 ಅ/1 ನೇದರಲ್ಲಿ ಪಿರ್ಯಾದಿಯವರು ವಾಸವಿರುವ ಮನೆಯ ಅಂಗಳದ ಜಾಗಕ್ಕೆ ಅಪರಾಧಿಕ ಅತಿಕ್ರಮಣ ಮಾಡಿದ್ದು, ಈ ಮೂಲಕ ಆರೋಪಿತರಾದ ನೀವೆಲ್ಲರೂ **ಭಾರತೀಯ ನ್ಯಾಯ ಸಂಹಿತೆ ಕಲಂ. 329(3) ಸಹಿತ 190** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ನಾಲ್ಕನೇಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಆರೋಪಿತರಾದ ನೀವೆಲ್ಲರೂ ಅಪರಾಧ ಮಾಡುವ ಏಕೋದ್ದೇಶದಿಂದ, 1ನೇ ಆರೋಪಿಯಾದ ನೀವು ಚಾಸಾ-4 ನೇಯವರಿಗೆ ಕೈಯಿಂದ ಮೈಮೇಲೆ ಸ್ವಇಚ್ಚೆಯಿಂದ ಹೊಡೆದು ಸಾದಾ ಸ್ವರೂಪದ ಗಾಯ ನೋವುಪಡಿಸಿದ್ದು, ಈ ಮೂಲಕ ಆರೋಪಿಯಾದ ನೀವೆಲ್ಲರೂ **ಭಾರತೀಯ ನ್ಯಾಯ ಸಂಹಿತೆ ಕಲಂ. 115(2) ಸಹಿತ 190** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಕೊನೆಯದಾಗಿ, ಈ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಆರೋಪಿತರಾದ ನೀವೆಲ್ಲರೂ ಅಪರಾಧ ಮಾಡುವ ಏಕೋದ್ದೇಶದಿಂದ, 2ನೇ ಆರೋಪಿಯಾದ ನೀವು ಚಾಸಾ-4 ನೇಯವರ ಎಡಕೈ ಮೇಲೆ ಕಲ್ಲಿನಿಂದ ಸ್ವಇಚ್ಚೆಯಿಂದ ಹೊಡೆದು ತೀವ್ರ ಸ್ವರೂಪದ ಗಾಯ ನೋವುಪಡಿಸಿದ್ದು, ಈ ಮೂಲಕ ಆರೋಪಿಯಾದ ನೀವೆಲ್ಲರೂ **ಭಾರತೀಯ ನ್ಯಾಯ ಸಂಹಿತೆ ಕಲಂ. 118(1) ಸಹಿತ 190** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ1 : ಈಗ ನಿಮಗೆ ಓದಿ ಹೇಳಿದ ಆರೋಪಣೆ ತಿಳಿಯಿತೆ?

1 ರಿಂದ 9 ನೇ ಆರೋಪಿತರ ಉತ್ತರ: ತಿಳಿಯಿತು

ಪ್ರಶ್ನೆ2 : ಸದ್ರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

1 ರಿಂದ 9 ನೇ ಆರೋಪಿತರ ಉತ್ತರ: ವಿಚಾರಣೆಯಾಗಬೇಕು

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿತರು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ)

**ಸಹಿ ಇದೆ/-**

ದಿನಾಂಕಃ- 13-08-2025.

**(ಅನಿಲ್ ಜೋನ್ ಸಿಕ್ವೇರಾ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ., ನ್ಯಾಯಾಲಯ, ಹೊನ್ನಾವರ.**

1 ನೇ ಆರೋಪಿಯ ಸಹಿಃ- ಸಹಿ ಇದೆ

2 ನೇ ಆರೋಪಿಯ ಸಹಿಃ- ಸಹಿ ಇದೆ

3 ನೇ ಆರೋಪಿಯ ಸಹಿಃ- ಸಹಿ ಇದೆ

4 ನೇ ಆರೋಪಿಯ ಸಹಿಃ- ಸಹಿ ಇದೆ

5 ನೇ ಆರೋಪಿಯ ಸಹಿಃ- ಸಹಿ ಇದೆ

6 ನೇ ಆರೋಪಿಯ ಸಹಿಃ- ಸಹಿ ಇದೆ

7 ನೇ ಆರೋಪಿಯ ಸಹಿಃ- ಸಹಿ ಇದೆ

8 ನೇ ಆರೋಪಿಯ ಸಹಿಃ- ಸಹಿ ಇದೆ

9 ನೇ ಆರೋಪಿಯ ಸಹಿಃ- ಸಹಿ ಇದೆ

*****